# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.


ದಿನಾಂಕ : 14.02.2018

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ.9981

## ಸಭಾ ನಡಾವಳಿ

ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 23.01.2018 ರಂದು ಬೆಳಗ್ಗೆ 11 :00 ಗಂಟೆಗೆ ಜನ ಸಂಪರ್ಕ ಸಭೆಯನ್ನು ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-

1. ಶ್ರೀಯುತ ಸೋಮರಾಜು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಕೇಶವಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ಎಂ. ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
7. ಶ್ರೀ ಸೋಮಶೇಖರ್, ಕಿರಿಯ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ.
8. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.

ಸಭೆಗೆ ಹಾಜರಿದ್ದ ಗ್ರಾಹಕರು :

1. ಶ್ರೀ ಅಶ್ವಥ್‌ನಾರಾಯಣ್, ಮೈಸೂರು.

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ದಿನಾಂಕ : 08.11.2017 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು 4, ಈ ದೂರುಗಳ ಬಗ್ಗೆಹರೆದಿರುತ್ತದೆ.

ದಿನಾಂಕ : 23.01.2018 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 1

...2

ದಿನಾಂಕ : 08.11.2017 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ. ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮಗಳು |
|---|---|---|---|
| 1 | ಶ್ರೀ ರವಿಕುಮಾರ್ ವಿಜಯನಗರ 1ನೇ ಹಂತ | ಮೊದಲನೆಯದಾಗಿ ಉಪ ವಿಭಾಗಧಿಕಾರಿ ಯವರು ಹಾಗೂ ಶಾಖಾಧಿಕಾರಿಯವರು ತಮ್ಮ ಎಲ್ಲಾ ದೂರುಗಳಿಗೆ ಸ್ಪಂದಿಸುತ್ತಿರುವುದಾಗಿ ಅಭಿನಂದನೆ ಯನ್ನು ತಿಳಿಸಿದರು.<br>▪ ವಿಜಯನಗರ 3ನೇ ಹಂತ, 'ಡಿ' ಬ್ಲಾಕ್‌ನಲ್ಲಿ ಶ್ರೀ ಲೋಬೊ ರವರ ಮನೆಗೆ ಲೋ ಓಲ್ಟೇಜ್ ಇರುವುದಾಗಿ ತಿಳಿಸಿರುತ್ತಾರೆ.<br>ವಿಜಯನಗರ 3ನೇ ಹಂತದ ಗರುಡಾಚಾರ್ ಬಡಾವಣೆಯಲ್ಲಿ ಕಂಬ ಶಿಥಿಲಗೊಂಡಿರುವುದಾಗಿ ತಿಳಿಸಿರುತ್ತಾರೆ | ಶಾಖಾಧಿಕಾರಿಯವರು ಸ್ಥಳ ಪರಿಶೀಲಿಸಿ ವಿಜಯನಗರ 3ನೇ ಹಂತ, 'ಡಿ' ಬ್ಲಾಕ್‌ನ ಲೋಬೊರವರ ದೂರನ್ನು ನಿವಾರಿಸಿರುತ್ತಾರೆ. |
| 2 | ಅಶ್ವಥ್ ನಾರಾಯಣ | ▪ ಜನ ಸಂಪರ್ಕ ಸಭೆಯನ್ನು ಹೆಚ್ಚಿನ ಪ್ರಚಾರ ಮಾಡಬೇಕಾಗಿ ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸುತ್ತಾ ಈಗಾಗಲೆ ಜನ ಸಂಪರ್ಕ ಸಭೆಯ ಕುರಿತ ಪ್ರಚಾರ ಮಾಡಿರುವುದಾ ತಿಳಿಸಿರುತ್ತಾರೆ. |
| 3 | ಬಸವರಾಜು, ಹಿನಕಲ್, ಮೈಸೂರು | ▪ ಅಧಿಕ ಭದ್ರತಾ ಠೇವಣಿ ಮೊತ್ತವನ್ನು ಬಾಡಿಗೆದಾರರಾದ ನಾವು ಕಟ್ಟಬೇಕೆ ? ಅಥವಾ ಮನೆ ಮಾಲೀಕರು ಕಟ್ಟಬೇಕೆ ? ಎಂಬುದನ್ನು ಪ್ರಶ್ನಿಸಿದ್ದರು | ಅಧೀಕ್ಷಕ ಇಂಜಿನಿಯರ್(ವಿ) ರವ ಜನ ಸಂಪರ್ಕ ಸಭೆಯ ಗ್ರಾಹಕರಿಗೆ ಉತ್ತರಿಸಿರುತ್ತಾರೆ |
| 4 | ಶ್ರೀ ಚಿನ್ನಪ್ಪ, ಲಿಂಗದೇವರ ಕೊಪ್ಪಲು, ಮೈಸೂರು | ▪ ಇವರು ಹೊಸ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ನೊಂದಾಯಿಸಿದ್ದು ಹಣ ಪಾವತಿಸಲು ಇಲಾಖೆಯಿಂದ ಮಂಜೂರಾತಿ ನೀಡಿದ್ದು ನಾನು ನಿವೃತ್ತ ಸೈನಿಕನಾಗಿದ್ದು ಇದರ ಠೇವಣಿ ಮೊತ್ತವನ್ನು ಕಡಿಮೆ ಮಾಡಿಕೊಡಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ) ರವ ಜನ ಸಂಪರ್ಕ ಸಭೆಯ ಗ್ರಾಹಕರಿಗೆ ಉತ್ತರಿಸಿರುತ್ತಾರೆ |

ನಂತರ, ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ದಿನಾಂಕ : 23.01.2018 ರ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಅಶ್ವಥ್ ನಾರಾಯಣ | ▪ ಬಹುಮಹಡಿ ಕಟ್ಟಡ ಹಾಗೂ ಲೇಔಟ್ ಬಡಾವಣೆಗಳ ಮಂಜೂರಾತಿ ನೀಡುವಾಗ ಇದರ ಒಂದು ಪ್ರತಿಯನ್ನು ಗ್ರಾಹಕರಿಗೆ ನೀಡಲು ಕೋರಿರುತ್ತಾರೆ. | ▪ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಉತ್ತರಿಸುತ್ತಾ, ಈಗಾಗಲೇ ಮಂಜೂರಾತಿ ಸಮಯದಲ್ಲಿ ಮಂಜೂರಾತಿ ಪತ್ರಗಳನ್ನು ನೀಡುತ್ತಿದ್ದು, ಗ್ರಾಹಕರ ಸೂಕ್ತ ವಿಳಾಸವಿಲ್ಲದ ಕಾರಣ ಗ್ರಾಹಕರ ಪ್ರತಿಯನ್ನು ಕಡತದಲ್ಲಿ ಲಗತ್ತಿಸಲಾಗುತ್ತಿರುತ್ತದೆ. ಹಾಗೂ ಸೂಕ್ತ ವಿಳಾಸದ ವಿವರ ಒದಗಿಸಿದಲ್ಲಿ ಮಂಜೂರಾತಿ ಪ್ರತಿಗಳನ್ನು ಗ್ರಾಹಕರಿಗ ತಲುಪಿಸುವ ವ್ಯವಸ್ಥೆ ಮಾಡಲಾಗುವುದು.<br>▪ ಎಲ್ಲಾ ಶಾಖಾಧಿಕಾರಿಗಳಿಗೆ ಎಂ.ಎಸ್ ಬಿಲ್ಡಿಂಗ್/ ಬಡಾವಣೆಯ ಅಂದಾಜುಪಟ್ಟಿ ಸಲ್ಲಿಸುವಾಗ ಪ್ರತಿ ಅಂದಾಜು ಪಟ್ಟಿಯ ಪ್ರತಿಯಲ್ಲಿ ಸಹಿ ಮಾಡಿ ಸಲ್ಲಿಸಲು ಸೂಚಿಸಿದ್ದರು. |

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆದ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :
1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.